| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**X1 – 2025**

| ವಿಷಯ ಸಂಕೇತ / Subject Code | **21 (NS)** |
|---|---|

# ಇತಿಹಾಸ / HISTORY

**(Kannada and English Versions)**

[ಸಮಯ: 3 ಗಂಟೆಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 39] [ಗರಿಷ್ಠ ಅಂಕಗಳು : 80]

[Time : 3 Hours] [Total No. of questions : 39] [Max. Marks : 80]

**(Kannada Version)**

***ಸೂಚನೆಗಳು :*** *1. ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.*

*2. ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.*

*3. ಭಾಗ–'ಎ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.*

*4. ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳು ಭೂಪಟದ ಪ್ರಶ್ನೆ ಸಂಖ್ಯೆ 39 'A' ಬದಲಿಗೆ ಪ್ರಶ್ನೆ ಸಂಖ್ಯೆ 39 'B' ಯನ್ನು ಉತ್ತರಿಸುವುದು.*

**ಭಾಗ – ಎ**

I. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(5 × 1 = 5)**

1) ಮೂಲಾಧಾರಗಳನ್ನು ಹೆಕ್ಕಿ ತೆಗೆಯಲು ಕೈಗೊಳ್ಳುವ ವೈಜ್ಞಾನಿಕ ಭೂ ಅಗೆತ.

a) ಸ್ಮಾರಕಗಳ ಅಧ್ಯಯನ b) ಶಾಸನಗಳ ಅಧ್ಯಯನ

c) ಭೂಉತ್ಖನನ d) ನಾಣ್ಯಗಳ ಅಧ್ಯಯನ

2) ಗಂಗರ ಪ್ರಸಿದ್ಧ ದೊರೆ

a) ಮಯೂರ ವರ್ಮ b) ದಂತಿದುರ್ಗ

c) ದುರ್ವಿನೀತ d) ಚಾವುಂಡರಾಯ

3) ಪಲ್ಲವರ ರಾಜಧಾನಿ

a) ಬಾದಾಮಿ b) ತಲಕಾಡು

c) ಬನವಾಸಿ d) ಕಂಚಿ

4) ಬೆಂಗಳೂರಿನ ಸ್ಥಾಪಕನು

a) ಮದಕರಿ ನಾಯಕ

b) ಒಂದನೇಯ ಕೆಂಪೇಗೌಡ

c) ರಣಭೈರೇಗೌಡ

d) ಶಿವಪ್ಪ ನಾಯಕ

5) 'ಭಾರತದಲ್ಲಿ ಇಂಗ್ಲೀಷ್ ಶಿಕ್ಷಣದ ಮಹಾಸನ್ನದು' ಎಂದು ಕರೆಯುವ ವರದಿ.

a) ವುಡ್ಸ್‌ನ ವರದಿ

b) ಮೆಕಾಲೆ ವರದಿ

c) ಧಾರ್ ಸಮಿತಿಯ ವರದಿ

d) ನೆಹರೂ ವರದಿ

II. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ. **(5 × 1 = 5)**

(ಫ್ರಾನ್ಸಿಸ್ಕೊ–ಡಿ–ಅಲ್ಮಿಡಾ, ಕಿತಾಬ್–ಉಲ್–ಹಿಂದ್, ಸತ್ತವರ ಗುಡ್ಡ, ಅಲಿಘರ್, ಪಾರ್ಶ್ವನಾಥ, ಮಂಜಿರ್–ಉಲ್–ಇನ್ಸಾ)

6) ಮೊಹೆಂಜೋದಾರೋ ಪದದ ಅರ್ಥ ______________.

7) ______________ ನು 23 ನೇ ತೀರ್ಥಂಕರನು.

8) ಅಲ್ಬೆರುನಿಯ ಶ್ರೇಷ್ಠ ಕೃತಿ ______________.

9) ಭಾರತದಲ್ಲಿನ ಪೋರ್ಚುಗೀಸರ ಮೊದಲ ವೈಸ್‌ರಾಯ್ ______________.

10) ಸರ್ ಸೈಯ್ಯದ್ ಅಹಮ್ಮದ್ ಖಾನ್‌ರು ______________ ಚಳುವಳಿಯನ್ನು ಆರಂಭಿಸಿದರು.

III. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. **(5 × 1 = 5)**

11)

| ಎ | | ಬಿ | |
|---|---|---|---|
| a) | ದಯಾರಾಮ್ ಸಹಾನಿ | i) | ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ |
| b) | ಕಾನಿಷ್ಕ | ii) | 'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ' |
| c) | ಬಸವೇಶ್ವರರು | iii) | ಭಾರತದ ಉಕ್ಕಿನ ಮನುಷ್ಯ |
| d) | ಲಾರ್ಡ್ ಡಾಲ್‌ಹೌಸಿ | iv) | ಸಹಾಯಕ ಸೈನ್ಯ ಪದ್ಧತಿ |
| e) | ವಲ್ಲಭಭಾಯಿ ಪಟೇಲ್ | v) | ಹರಪ್ಪ ಶೋಧನೆ |
| | | vi) | ಕುಶಾಣರ ಪ್ರಸಿದ್ಧ ದೊರೆ |

IV. ಈ ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 1** ಪದ ಅಥವಾ **1** ವಾಕ್ಯದಲ್ಲಿ ಉತ್ತರಿಸಿ. **($5 \times 1 = 5$)**

12) **'ಇಂಡಿಕಾ'** ಎಂಬ ಗ್ರಂಥವನ್ನು ರಚಿಸಿದವರು ಯಾರು?

13) ಗೌತಮಿ ಬಾಲಶ್ರೀಯು ಹೊರಡಿಸಿದ ಶಿಲಾಶಾಸನ ಯಾವುದು?

14) ಕದಂಬ ಮನೆತನದ ಸ್ಥಾಪಕ ಯಾರು?

15) ಶಿವಪ್ಪ ನಾಯಕನ 'ಶಿಸ್ತು' ಎಂದರೇನು?

16) 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಿದವರು ಯಾರು?

## ಭಾಗ – ಬಿ

V. ಈ ಕೆಳಗಿನ **ಯಾವುದಾದರೂ ಎಂಟು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 2** ಪದ ಅಥವಾ **2** ವಾಕ್ಯಗಳಲ್ಲಿ ಉತ್ತರಿಸಿ. **($8 \times 2 = 16$)**

17) 'ಆಧಾರಗಳಿಲ್ಲದೆ ಇತಿಹಾಸವಿಲ್ಲ'. ಏಕೆ?

18) **'ಪ್ಯಾಲಿಯೋಲಿಥಿಕ್'** ಪದದ ಅರ್ಥವೇನು?

19) ಜೈನ ಧರ್ಮದ ಪಂಗಡಗಳಾವುವು?

20) ಮೌರ್ಯರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಎರಡು ಬಗೆಯ ನ್ಯಾಯಾಲಯಗಳು ಯಾವುವು?

21) ಫಾಹಿಯಾನ್ ಯಾರು? ಅವನು ಏಕೆ ಭಾರತಕ್ಕೆ ಬಂದನು?

22) ಶಿವಾಜಿಯ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳನ್ನು ಹೆಸರಿಸಿ.

23) ಶ್ರೀರಂಗಪಟ್ಟಣ ಒಪ್ಪಂದದ ಯಾವುದಾದರೂ ಎರಡು ಕರಾರುಗಳನ್ನು ತಿಳಿಸಿ.

24) ಭಾರತದಲ್ಲಿ ಬ್ರಿಟೀಷರು ಜಾರಿಗೆ ತಂದ ಯಾವುದಾದರೂ ಎರಡು ಭೂ ಕಂದಾಯ ಪದ್ಧತಿಗಳನ್ನು ಹೆಸರಿಸಿ.

25) ಸ್ವಾಮಿ ವಿವೇಕಾನಂದರು ಯಾವಾಗ ಮತ್ತು ಎಲ್ಲಿ ಜನಿಸಿದರು?

26) ಮಾರ್ಕ್ ಕಬ್ಬನ್‌ರ ಯಾವುದಾದರೂ ಎರಡು ಆಡಳಿತ ಸುಧಾರಣೆಗಳನ್ನು ಬರೆಯಿರಿ.

27) ಬಂಗಾಳವನ್ನು ಯಾರು ಮತ್ತು ಯಾವಾಗ ವಿಭಜಿಸಿದರು?

28) ಗಾಂಧೀಜಿಯವರು 'ಉಪ್ಪಿನ ಸತ್ಯಾಗ್ರಹ' ವನ್ನು ಎಲ್ಲಿಂದ ಆರಂಭಿಸಿದರು ಮತ್ತು ಅದು ಎಲ್ಲಿ ಕೊನೆಗೊಂಡಿತು?

29) ಜೆ.ವಿ.ಪಿ. ಸಮಿತಿಯ ಯಾರಾದರೂ ಇಬ್ಬರು ಸದಸ್ಯರನ್ನು ಹೆಸರಿಸಿ.

## ಭಾಗ – ಸಿ

VI. ಈ ಕೆಳಗಿನ **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ 15** ರಿಂದ **20** ವಾಕ್ಯಗಳಲ್ಲಿ ಉತ್ತರಿಸಿ : **($2 \times 5 = 10$)**

30) ಚೋಳರ ಗ್ರಾಮಾಡಳಿತವನ್ನು ವಿವರಿಸಿ.

31) ಹೊಯ್ಸಳರ ವಾಸ್ತುಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

32) ರಾಮಾನುಜಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.

33) ಮೈಸೂರನ್ನು 'ಮಾದರಿ ರಾಜ್ಯ'ವನ್ನಾಗಿ ಮಾಡುವಲ್ಲಿ ಮಿರ್ಜಾ ಇಸ್ಮಾಯಿಲ್‌ರವರ ಪಾತ್ರವನ್ನು ಚಿತ್ರಿಸಿ.

## ಭಾಗ – ಡಿ

VII. ಈ ಕೆಳಗಿನ **ಯಾವುದಾದರೂ ಎರಡು** ಪ್ರಶ್ನೆಗಳಿಗೆ **30** ರಿಂದ **40** ವಾಕ್ಯಗಳಲ್ಲಿ ಉತ್ತರಿಸಿ. **(2 × 10 = 20)**

34) ಬುದ್ಧನ ಜೀವನ ಮತ್ತು ಬೋಧನೆಗಳನ್ನು ಕುರಿತು ಚರ್ಚಿಸಿ.

35) ಅಲ್ಲಾವುದ್ದೀನ್ ಖಿಲ್ಜಿಯ ಸೈನಿಕ ಸಾಧನೆಗಳನ್ನು ವಿಶ್ಲೇಷಿಸಿ.

36) ವಿಜಯನಗರ ಕಾಲದ ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

37) ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸಿ.

## ಭಾಗ – ಇ

VIII. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **(4 × 1 = 4)**

38) a) ಗುಪ್ತ ಶಕೆಯ ಆರಂಭ.

b) ಮಹಮ್ಮದ್–ಬಿನ್–ತುಘಲಕ್‌ನ ರಾಜಧಾನಿಯ ವರ್ಗಾವಣೆ.

c) ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ.

d) ಭಾರತಕ್ಕೆ ಆರ್ಯರ ಆಗಮನ.

IX. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

39) **(A)** ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಪ್ರತಿಯೊಂದು ಸ್ಥಳದ ಬಗ್ಗೆ ವಿವರಣೆ ಬರೆಯಿರಿ. **(5 + 5 = 10)**

a) ಹರಪ್ಪ

b) ಪಾಟಲೀಪುತ್ರ

c) ಬಾದಾಮಿ

d) ಬೀದರ್

e) ಪಾಂಡಿಚೇರಿ

## ಭಾಗ – ಎಫ್

## (ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)

39) **(B)** ಕೆಳಗಿನ ಪ್ರಶ್ನೆಯನ್ನು **30** ರಿಂದ **40** ವಾಕ್ಯಗಳಲ್ಲಿ ಉತ್ತರಿಸಿ. **($1 \times 10 = 10$)**

ಇಮ್ಮಡಿ ಪುಲಕೇಶಿಯ ಸಾಧನೆಗಳನ್ನು ವಿವರಿಸಿ.

**(English Version)**

***Instructions :*** *1. Write Sl. Nos. of the questions correctly.*

*2. Answer the questions according to the instructions given.*

*3. For Part-'A' questions only the answers first written will be considered for evaluation.*

*4. Visually Challenged Students need to answer Question No. 39 'B' instead of map Question No. 39 'A'.*

## PART – A

I. Choose and write the correct answer from the given : **(5 × 1 = 5)**

1) The scientific digging of earth for unearthing sources is

a) Study of Monuments b) Study of Inscriptions

c) Excavations d) Study of Coins

2) The most famous ruler amongst the Ganga King's

a) Mayura Varma b) Dantidurga

c) Dhurvinita d) Chavundaraya

3) The capital of the Pallava's

a) Badami b) Talakadu

c) Banavasi d) Kanchi

4) The founder of Bengaluru

a) Madakari Nayaka b) Kempegowda I

c) Ranabhaire Gowda d) Shivappa Nayaka

5) Which report is called as the 'Magna Carta of English education in India'?

a) Woods Despatch b) Macauley Report

c) Dhar Committee Report d) Nehru Report

II. Fill in the blanks with appropriate answer's given : **(5 × 1 = 5)**

(Fransico-De-Almeida, Kitab-Ul-Hind, The mound of the dead, The Aligarh, Parshvanatha, Manzir-Ul-Insha)

6) The word Mohenjodaro means _______________.

7) The 23rd Thirthankara was _______________.

8) _______________ was the famous book of Alberuni.

9) _______________ was the first Portuguese Viceroy in India.

10) _______________ movement was started by Sir Syed Ahmad Khan.

III. Match the following : **(5 × 1 = 5)**

11)

| | A | | B |
|---|---|---|---|
| a) | Dayaram Sahani | i) | Shakti Vishistadwaita Philosophy |
| b) | Kanishka | ii) | 'Doctrine of Lapse' |
| c) | Basaweshwara | iii) | Iron man of India |
| d) | Lord Dalhousie | iv) | The Subsidiary Alliance |
| e) | Vallabhbhai Patel | v) | Discovered Harappa |
| | | vi) | The greatest king of the Kushana's |

IV. Answer the following questions in **1** word or **1** sentence **each** : **(5 × 1 = 5)**

12) Who wrote the book 'Indica'?

13) Which was the inscription issued by Gautami Balashri?

14) Who was the founder of Kadamba dynasty?

15) What is Shivappa Nayaka's Shistu?

16) Who gave the call 'Go back to Vedas'?

## PART – B

V. Answer **any eight** of the following questions in **2** words or **2** sentences **each** : **(8 × 2 = 16)**

17) 'No Sources No History'. Why?

18) What is the meaning of the term 'Paleolithic'?

19) Which are the sects of Jainism?

20) Which were the two types of courts that existed in the Mauryan Period?

21) Who was Fa-hien? Why did he come to India?

22) Name two persons who influenced Shivaji.

23) Mention any two terms of the treaty of Shrirangapattana.

24) Name any two Land Revenue systems introduced by British in India.

25) When and where was Swami Vivekananda born?

26) Write any two administrative reforms of Mark Cubbon.

27) Who partitioned Bengal and when?

28) From where did Gandhiji start the 'Salt March' and where did it culminate?

29) Name any two members of the JVP Committee.

## PART – C

VI. Answer **any two** of the following questions in **15** to **20** sentences **each** : **(2 × 5 = 10)**

30) Describe the Village administration of the Cholas.

31) Explain the main features of Hoysala Architecture.

32) Describe the life and teachings of Ramanujacharya.

33) Sketch the role of Mirza Ismail in making Mysore 'A model state'.

## PART – D

VII. Answer **any two** of the following questions in **30** to **40** sentences **each** : **(2 × 10 = 20)**

34) Discuss the life and teachings of Buddha.

35) Analyse the military achievements of Alla-ud-din-Khilji.

36) Describe the Religion, Literature, Art and Architecture of the Vijayanagara Period.

37) Explain the causes and results of the first war of Indian Independence.

## PART – E

VIII. Arrange the following events in chronological order : **(4 × 1 = 4)**

38) a) Commencement of Gupta Era.

b) Transfer of Capital by Muhammad Bin Tughluq.

c) The establishment of the Mysore University.

d) Advent of Aryans into India.

IX. Answer the following questions as indicated :

39) **(A)** Mark the following Historical Places on the outline map of India provided to you and add an explanatory note. **(5 + 5 = 10)**

a) Harappa

b) Pataliputra

c) Badami

d) Bidar

e) Pondicherry

## PART – F

### (For Visually Challenged Students only)

39) **(B)** Answer the following question in **30** to **40** sentences :

**(1 × 10 = 10)**

Describe the achievements of Pulikeshi II.